

ಟೆಕ್ನೋವಿಷನ್-2015 ಎಂಬ ರಾಷ್ಟ್ರಮಟ್ಟದ ಪ್ರದರ್ಶನದಲ್ಲಿ ಪ್ರಥಮ ಸ್ಥಾನ ಪಡೆದ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ಕೆಎಲ್‌ಇ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು

# ಬೈಕ್ ಸುರಕ್ಷೆಗೆ ಎಸ್‌ಎಂಎಸ್ ಉಪಾಯ

■ ಶಿವಲಿಂಗ ಸಿದ್ನಾಳ

ನಿಮ್ಮ ಬೈಕ್ ಕಳುವಾಯಿತೆಂದು ಕಳವಳದಿಂದ ಹುಡುಕುವ ಅಗತ್ಯವಿಲ್ಲ, ಠಾಣೆಗೆ ದೂರು ನೀಡುವ ತಾಪತ್ರಯವಿಲ್ಲ, ಕಳುವಾಗುವ ಮುನ್ನವೇ ಕಳ್ಳನಿಂದ ನಿಮ್ಮ ಬೈಕ್ ಮರಳಿ ಪಡೆಯಬಹುದು. ನಿಮಗೂ ಟೆನ್ಶನ್ ಕಡಿಮೆ; ಪೊಲೀಸರಿಗೂ ಕೆಲಸ ಕಡಿಮೆ. ಅದು ಹೇಗೆ ಅಂತೀರಾ?

ರಾಷ್ಟ್ರಮಟ್ಟದ ಟೆಕ್ನೋವಿಷನ್ ಪ್ರಶಸ್ತಿ ಪಡೆದ ವಿನೂತನ ತಂತ್ರಜ್ಞಾನ ಸಿಮ್ ಮತ್ತು ಜಿಪಿಎಸ್ ತಂತ್ರಜ್ಞಾನದಿಂದ ಬೈಕ್ ಕಳ್ಳತನ ತಪ್ಪಿಸಬಹುದು.

ನಿಮ್ಮ ಬೈಕ್‌ಗೂ ಒಂದು ಸಿಮ್ ಅಳವಡಿಸಬಹುದು. ಅದನ್ನು ನಿಮ್ಮ (ಬೈಕ್ ಓನರ್) ಮೊಬೈಲ್ ನಂಬರ್‌ಗೆ ಕನೆಕ್ಟ್ ಮಾಡಬಹುದು. ಬೈಕ್ ಸ್ಟಾರ್ಟ್ ಆದಾಗ ಅದು ನಿಮ್ಮ ಮೊಬೈಲ್‌ಗೆ ಮೆಸೇಜ್ ಅಥವಾ ಮಿಸ್ಡ್ ಕಾಲ್ ಮಾಡುತ್ತದೆ. ವಾಪಸ್ ಬೈಕ್ ನಂಬರ್‌ಗೆ ಆಫ್ ಎಂದು ಮೆಸೇಜ್ ಮಾಡಿದರೆ ಬೈಕ್ ಇಂಜಿನ್ ತಕ್ಷಣವೇ ಆಫ್ ಆಗುತ್ತದೆ. ನೀವು ಮಲಗಿದಾಗ ಕಳ್ಳನೊಬ್ಬ ನಕಲಿ ಕೀ ಬಳಸಿ ಬೈಕ್ ಸ್ಟಾರ್ಟ್ ಮಾಡಿದರೆ ಸಾಕು ತಕ್ಷಣವೇ ನಿಮ್ಮ ಮೋಬೈಲ್‌ಗೆ ಮೆಸೇಜ್ ಬರುತ್ತದೆ. ಆಗ ನೀವು ಎಚ್ಚೆತ್ತು ಅದೇ ನಂಬರ್ ಗೆ ಆಫ್ ಎಂದು ರಿಪ್ಲೈ ಮಾಡಿದರೆ ಇಂಜಿನ್ ಆಫ್ ಆಗಿ ಬೈಕ್ ನಿಂತು ಬಿಡುತ್ತದೆ. ತಕ್ಷಣ ಜಿಪಿಎಸ್ ತಂತ್ರಜ್ಞಾನದ ಮೂಲಕ ಆ ಬೈಕ್ ಇರುವ ಲೊಕೇಶನ್ ತಿಳಿದು ಕಳ್ಳನನ್ನು ಹಿಡಿಯಬಹುದು. ಕಳ್ಳ ಸಿಗದಿದ್ದರೂ ಕಡೆಯ ಪಕ್ಷ ನಿಮ್ಮ ಬೈಕ್ ಅಂತೂ ಸಿಕ್ಕೇ ಸಿಗುತ್ತದೆ. ಇಂಥದ್ದೊಂದು ಸುಲಭ ಮತ್ತು ಅಗತ್ಯ ಡಿಟೆಕ್ಟರ್ ತಂತ್ರಜ್ಞಾನವನ್ನು ಗ್ರಾಮೀಣ ಭಾಗದ ತಾಂತ್ರಿಕ ವಿದ್ಯಾರ್ಥಿಗಳು ಆವಿಷ್ಕರಿಸಿದ್ದಾರೆ.

ದೆಹಲಿಯ ಸಂಸ್ಥೆಯೊಂದು ಪ್ರತಿವರ್ಷದಂತೆ ಚಿಕ್ಕೋಡಿಯ ಸಿ.ಬಿ.ಕೋರೆ ಪಾಲಿಟೆಕ್ನಿಕ್‌ನಲ್ಲಿ ಟೆಕ್ನೋವಿಷನ್-2015 ಎಂಬ ರಾಷ್ಟ್ರಮಟ್ಟದ ಪ್ರಾಜೆಕ್ಟ್ ಮಾದರಿ ಪ್ರದರ್ಶನ ಏರ್ಪಡಿಸಿತ್ತು. ಕರ್ನಾಟಕ, ಮಹಾರಾಷ್ಟ್ರ ಹಾಗೂ ಇತರ ರಾಜ್ಯಗಳಿಂದ 50ಕ್ಕೂ ಹೆಚ್ಚು ಕಾಲೇಜುಗಳು ಭಾಗವಹಿಸಿದ್ದವು. ಆ ಪೈಕಿ ಮಹಾಲಿಂಗಪುರದ ಕೆಎಲ್‌ಇ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಅನ್ವೇಷಣೆ ಮಾಡಿದ 'ಆ್ಯಂಟಿ ಥೆಫ್ಟ್ ವೆಹಿಕಲ್ ಸೆಕ್ಯುರಿಟಿ ವಿಥ್ ಜಿಎಸ್‌ಎಂ ಅಂಡ್ ಜಿಪಿಎಸ್ ಟೆಕ್ನಾಲಜಿ' ಎಂಬ ಹೆಸರಿನ ಮಾದರಿ ರಾಷ್ಟ್ರಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿದೆ. ಇಲೆಕ್ಟ್ರಿಕಲ್ ಅಂಡ್ ಇಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದಲ್ಲಿ ಎಚ್‌ಒಡಿ ವಂದನಾ ಪಸಾರ, ಮಂಜುನಾಥ ನಾಯ್ಕರ, ಮಂಜುನಾಥ ಅರಕೇರಿ ಮಾರ್ಗದರ್ಶನದಲ್ಲಿ ಶ್ರೀಕಾಂತ ಮಾಳಿ, ಶಿವಾನಂದ ಜೀವಾಪೂರ, ಬಾಹುಬಲಿ ರೊಡ್ಡನ್ನವರ, ಶಿವಾನಂದ ಜಗದಾಳ, ಮುತ್ತಪ್ಪ ಗಣಿ ಈ ಪ್ರಾಜೆಕ್ಟ್ ಸಿದ್ಧಪಡಿಸಿದ್ದಾರೆ.

## ಸ್ಮಾರ್ಟ್ ಬೈಕ್ ರಚನೆ

'ಪ್ರದರ್ಶನದಲ್ಲಿ ಏನು ಇಡಬೇಕು ಎಂಬ ಬಗ್ಗೆ ಹೊಸ ವಿಚಾರಗಳನ್ನು ಅರಸುವಾಗ ಇತ್ತೀಚೆಗೆ ಹೆಚ್ಚುತ್ತಿರುವ ಬೈಕ್ ಕಳ್ಳತನದ ಹಾವಳಿಗೆ ಬೇಸತ್ತು ಇಂಥ ಕಳ್ಳತನಕ್ಕೊಂದು ಮುನ್ಸೂಚನೆ ಸಿಗುವಂತಿದ್ದರೆ ಹೇಗೆ ಎಂಬ ಆಲೋಚಿಸಿ ಕಾರ್ಯೋನ್ಮುಖರಾದರು ಈ ವಿದ್ಯಾರ್ಥಿಗಳು. ಕೇವಲ ಒಂದು ಸೆಕ್ಯುರಿಟಿ ಕಂಟ್ರೋಲರ್ ಚಿಪ್, ಒಂದು ಸಿಮ್ ಕಾರ್ಡ್, ಒಂದು ಜಿಪಿಎಸ್ ತಂತ್ರಾಂಶ ಬಳಸಿ ತಮ್ಮ ಚಾಣಾಕ್ಷತದಿಂದ ಬೈಕ್ ಸೇರಿದಂತೆ ಯಾವುದೇ ವಾಹನವನ್ನು ಕಳ್ಳತನದಿಂದ ರಕ್ಷಿಸುವ ಇಂಥ ವಿನೂತನ ಪ್ರಯೋಗ ಮಾಡಿದ್ದಾರೆ. ಎಲ್ಲರಿಗೂ ಅಗತ್ಯವಿರುವ ಮತ್ತು ಕೈಗೆಟುಕುವ ಇಂಥ ತಂತ್ರಜ್ಞಾನ ಅಳವಡಿಸಲು ಕೇವಲ 5 ಸಾವಿರ ರೂಪಾಯಿ ಖರ್ಚಾಗುತ್ತದೆ. ಇದನ್ನು ಯಾವುದೇ ಮೆಕ್ಯಾನಿಕಲ್ ಮೇಸ್ತ್ರಿ ಕೂಡ ಒಮ್ಮೆ ನೋಡಿ ಅಳವಡಿಸಬಹುದು. ಫ್ಯಾನ್ಸಿ ನಂಬರ್, ಕುಷನ್ ವರ್ಕ್ ಎಂದು ವಾಹನಗಳ ಅಲಂಕಾರಕ್ಕೆ ಸುಮ್ಮನೆ ಸಾವಿರಾರು ರೂಪಾಯಿ ವ್ಯಯಿಸುವ ಬದಲು ಅದೇ ವೆಚ್ಚದಲ್ಲಿ ಇಂಥ ತಂತ್ರಜ್ಞಾನ ಅಳವಡಿಸಿದರೆ ಬೈಕ್ ಸುರಕ್ಷತಾ ದೃಷ್ಟಿಯಿಂದ ಒಳ್ಳೆಯದು' ಎನ್ನುತ್ತಾರೆ ಪ್ರಾಚಾರ್ಯ ಪ್ರೊ.ಎಸ್.ಐ. ಕುಂದಗೋಳ. ಮಾಹಿತಿಗಾಗಿ 908811278

■